KATK010048602022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.468/2022</u>**

ಪ್ರಾ.ಸಾ. ಃ **11**

ದೋ.ಸಾ. ಃ **21**

ದಿ.**09.01.2026**

ಹೆಸರು ಃ ಮಾರುತೀಶ್ ಹೆಚ್.ಎನ್.

ತಂದೆಯ ಹೆಸರು ಃ ನರಸಿಂಹಪ್ಪ ಹೆಚ್.

ವಯಸ್ಸು ಃ **33** ವರ್ಷ

ಉದ್ಯೋಗ ಃ ಸಿಪಿಸಿ **56,** ಜಯನಗರ ಪೋಲೀಸ್ ಠಾಣೆ

ವಾಸಸ್ಥಳ ಃ ಹೆಗ್ಗೆರೆ, ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. 2021 ರಿಂದ ಫೆಬ್ರವರಿ 2025 ರವರೆಗೆ ನಾನು ಸಿಇಎನ್ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.31.01.2023 ರಂದು ನಾನು ಈ ಪ್ರಕರಣದ 3 ನೇ ಆರೋಪಿ ನವಾಜ್ ನ ಬೆಂಗಾವಲಿನಲ್ಲಿದ್ದು, ಬೆಂಗಳೂರು ನಗರ ಹೊಸೂರು ಮುಖ್ಯ ರಸ್ತೆಯಲ್ಲಿ ಮಂಗಮ್ಮನಪಾಳ್ಯದ ಗಾರೆಪಾಳ್ಯ ಆಟೋ ಸ್ಟಾಂಡಿನ ಹತ್ತಿರ ಹೆಚ್ ಕೆ ಜಿ ಎನ್ ಪಂಕ್ಚರ್ ಅಂಗಡಿಯ ಮುಂಭಾಗದಲ್ಲಿ ಮಾಡಿದ ಮಹಜರನ್ನು ನಾನು ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿದೆನು. ಪಿಎಸ್ಐ ಶಮೀನ್ ರವರು ಕೊಟ್ಟ ಉಕ್ತಲೇಖನದಂತೆ ನಾನು ಮಹಜರನ್ನು ಟೈಪ್ ಮಾಡಿದ್ದೇನೆ. ನಿಶಾನೆ ಪಿ30 ಆ ಮಹಜರ್ ಆಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ30(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ31 ಮತ್ತು 32 ಮಹಜರ್ ಕಾಲದಲ್ಲಿ ತೆಗೆದ ಫೋಟೋಗಳಾಗಿರುತ್ತವೆ. ನಿಶಾನೆ ಪಿ31 ಮತ್ತು 32 ಫೋಟೋಗಳಲ್ಲಿ 3 ನೇ ಆರೋಪಿ ನವಾಜ್ ಇದ್ದಾನೆ. ಅವನು ಇವತ್ತು ನ್ಯಾಯಾಲಯದ ಮುಂದೆ ಇದ್ದಾನೆ.

**ಪಾಟೀ ಸವಾಲು ಶ್ರೀ.ಆರ್.ವಿ.ದೊಡ್ಡಶಾಣಯ್ಯ ವಕೀಲರಿಂದ 3 ನೇ ಆರೋಪಿತನ ಪರವಾಗಿ ಃ**

**3.** ಟೈಪ್ ಮಾಡಿದವರು ಎಂದು ಮಹಜರಿನಲ್ಲಿ ನನ್ನ ಹೆಸರು ಬರೆದಿಲ್ಲ. ಛಾಯಾಗ್ರಾಹಕರು ಯಾರು ಎಂದು ಮಹಜರಿನಲ್ಲಿ ಬರೆದಿಲ್ಲ. ದಿ.31.01.2023 ರಂದು ನಾನು ಬೆಂಗಳೂರು ಮಂಗಮ್ಮನಪಾಳ್ಯಕ್ಕೆ ಹೋಗಿಲ್ಲ, ನಾನು 3 ನೇ ಆರೋಪಿಯ ಬೆಂಗಾವಲಿನಲ್ಲಿ ಇರಲಿಲ್ಲ, ಮಹಜರನ್ನು ಟೈಪ್ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಟೈಪ್ ಮಾಡುವ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ._

**ಪಾಟೀ ಸವಾಲು ಶ್ರೀ.ಡಿ.ಎ.ಜಗದೀಶ್ ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ 1 ಮತ್ತು 2 ನೇ ಆರೋಪಿತರ ಪರ ವಕೀಲರು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು